KARNATAKA REGIONAL ORGANISATION FOR SOCIAL SERVICE
KROSS

ಖಾಸಗಿ ಪ್ರಸಾರಕ್ಕಾಗಿ

# ಅಲೆಗಳು

ತ್ರೈ ಮಾಸಿಕ ಪತ್ರಿಕೆ

ಸಂಚಿಕೆ 31 ಜುಲೈ 2015 -ಸೆಪ್ಟೆಂಬರ್ 2015





ಮುಖ್ಯ ಸಂಪಾದಕರು
ಫಾ. ಸೆಬಾಸ್ಟಿಯನ್ ಫೆರ್ನಾಂಡಿಸ್

**ಒಳ ಪುಟಗಳಲ್ಲಿ :**

**ಬಾರದ ಮಳೆ – ಬರದ ಛಾಯೆ**
ವರ್ಗೀಸ್ ಜಿ.ಎಂ.

**ಬಯೋಡೈಜಸ್ಟರ್**
ಡಾ. ರಾಜಶೇಖರ್

**ನರ್ಸಿಂಗ್ ಕೋರ್ಸ್‌ಗಳಿಗೆ ಉಚಿತ ವಿದ್ಯಾಭ್ಯಾಸ**

**ವಾರ್ತಾ ವಿಶೇಷ**

ಮುಖಪುಟ ವಿನ್ಯಾಸ
**ಅನೂಷ ಗ್ರಾಫಿಕ್ಸ್**

## ಓದುಗರೊಂದಿಗೆ ಕ್ಷಣ ಹೊತ್ತು ...

ನಲವತ್ತು ವರ್ಷಗಳಲ್ಲಿಯೇ ಅತ್ಯಂತ ಭೀಕರ ಬರಗಾಲವನ್ನು 2015 ನೇ ಸಾಲಿಗೆ ಕರ್ನಾಟಕ ಎದುರಿಸುತ್ತಿದೆ. ಈ ಸಾಲಿನಲ್ಲಿ ಮುಂಗಾರು ಮಳೆ ಕೊರತೆ ಶೇಕಡ 15 ನ್ನು ಮೀರಲಿದೆ ಎಂದು ಅಂದಾಜಿಸಲಾಗಿದೆ. ಇದು ಮುಂಗಾರು ಬೆಳೆ ಮತ್ತು ಗ್ರಾಮೀಣ ಆದಾಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಚಿಂತಿಸಲಾಗುತ್ತಿದೆ. ಕರ್ನಾಟಕ ಈಗಾಗಲೇ 30 ಜಿಲ್ಲೆಗಳ ಪೈಕಿ 27 ಜಿಲ್ಲೆಗಳ 136 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ರಾಜ್ಯದಲ್ಲಿ ಕಳೆದವರ್ಷ ಶೇಕಡಾ 95ರಷ್ಟು ಜಲಾಷಯಗಳು ತುಂಬಿತ್ತು ಆದರೆ, ಈ ಬಾರಿ ಶೇಕಡಾ 50ರಷ್ಟು ಜಲಾಷಯಗಳಲ್ಲಿ ನೀರಿಲ್ಲ. ಇದರಿಂದ 3380 ಮೆಗಾವ್ಯಾಟ್ ವಿಧ್ಯುತ್ ಕೊರತೆಯೂ ಎದುರಾಗಿದೆ. ಬರದಿಂದಾಗಿ ಸುಮಾರು 14,471 ಕೋಟಿ ರೂ. ಮೌಲ್ಯದ ಕೃಷಿ ಬೆಳೆ ಹಾಗೂ 1,164 ಕೋಟಿ ರೂ. ಮೌಲ್ಯದ ತೋಟಗಾರಿಕಾ ಬೆಳೆಯೂ ಸೇರಿದಂತೆ ಸುಮಾರು 16,000 ಕೋಟಿ ರೂಪಾಯಿಗಳ ನಷ್ಟ ಉಂಟಾಗಿ ರೈತರು ಕಂಗಾಲಾಗಿದ್ದಾರೆ. ರಾಜ್ಯದಲ್ಲಿ ಇದುವರೆಗೆ 477 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾಲದ ಶೂಲದ ಜೊತೆಗೆ ರಾಜ್ಯದಲ್ಲಿ ಭೀಕರ ಬರ ತಲೆದೋರಿರುವ ಕಾರಣ ರೈತರ ಸಂಕಷ್ಟ ಇನ್ನಷ್ಟು ಹೆಚ್ಚಿದೆ. ರೈತರು ಆತ್ಮಹತ್ಯೆ ಪ್ರವಣತೆಯಿಂದ ಹಿಂದೆ ಸರಿಯಬೇಕು. ಆತ್ಮಹತ್ಯೆ ಎಲ್ಲದುದಕ್ಕೂ ಪರಿಹಾರವಲ್ಲ. ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿ ಜೀವನ ನಡೆಸಬೇಕು.

ಭಾರತ ಕೃಷಿ ಪ್ರಧಾನ ದೇಶವಾಗಿದ್ದು, ಶೇ.70 ರಷ್ಟು ಮಂದಿ ಮಳೆಯಾಧಾರಿತ ಕೃಷಿಯನ್ನೇ ಅವಲಂಬಿಸಿದ್ದಾರೆ. ಆದುದರಿಂದ ನಮ್ಮ ದೇಶದಲ್ಲಿ ಹವಾಮಾನ ಬದಲಾವಣೆಯಿಂದಾಗಿರುವ ಬರ ವನ್ನು ಸೂಕ್ತ ರೀತಿಯಲ್ಲಿ ಎದುರಿಸಲು ಎಲ್ಲ ವರ್ಗದ ಜನರೂ ಸಹಕರಿಸಿ ದೇಶದ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಬೇಕಾಗಿದೆ.

ಒಟ್ಟಾರೆ ಅನಾಹುತಗಳನ್ನು ತಗ್ಗಿಸುವ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಸಕಾಲ ಇದು. ಮೊದಲು, ಕಾಲದ ಬದಲಾವಣೆಗೆ ನಮ್ಮನ್ನು ನಾವು ಹೊಂದಿಸಿಕೊಳ್ಳಬೇಕು. ಋತುಮಾನದಲ್ಲಾಗುವ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಬೇಕು. ಮಳೆಯಲ್ಲಾಗುವ ಏರುಪೇರುಗಳನ್ನು ತಿಳಿದುಕೊಳ್ಳಬೇಕು.

ಮಳೆಗಾಲ ಮತ್ತು ಮಳೆಯ ಪ್ರಮಾಣದ ಬದಲಾವಣೆಯಿಂದ ಈಗ ಅನುಸರಿಸುತ್ತಿರುವ ಕೃಷಿ ಪದ್ಧತಿ ಸಾಧ್ಯವೇ ಎಂದು ತಿಳಿದು ಬದಲಾಣೆಗೆ ತಕ್ಕಂತೆ ಕೃಷಿ ಚಟುವಟಿಕೆಯನ್ನು ಬೆಳೆಯುವ ಬೆಳೆಗಳಿಗೆ ನಾವು ಬದಲಾಯಿಸಿಕೊಳ್ಳಬೇಕು. ಕಡಿಮೆ ನೀರಿನ ಬೇಡಿಕೆಯುಳ್ಳ ಬೆಳೆಗಳನ್ನು ಆರಿಸಿಕೊಳ್ಳಬೇಕು. ಅನವಶ್ಯಕವಾಗಿ ಖರ್ಚುಮಾಡುವ ಶಕ್ತಿಯ ಪ್ರಮಾಣವನ್ನು ತಗ್ಗಿಸಬೇಕು . ಬರದ ಪರಿಸ್ಥಿತಿ ಹಾಗೂ ಅಧಿಕ ರಸಗೊಬ್ಬರದ ರೂಪ, ಪ್ರಮಾಣ, ಉಪಯೋಗಿಸುವ ವಿಧಾನ, ಸಾವಯವ ಕೃಷಿಯ ಅಳವಡಿಕೆ, ಕಡಿಮೆ ನೀರಿನ ಬೇಡಿಕೆಯ ಬೆಳೆ ಆಯ್ಕೆ, ದನಕರುಗಳ ಸಾಕಾಣಿಕೆ ಇತ್ಯಾದಿ ಹಲವು ಹತ್ತು ರೀತಿಯಿಂದ ಹವಾಮಾನದ ಬದಲಾವಣೆಯಿಂದ ಆಗುವ ತೊಂದರೆಯ ಪ್ರಮಾಣವನ್ನು ತಗ್ಗಿಸಬಹುದು. ಇದರ ಜೊತೆಗೆ, ಮಳೆಯ ನೀರನ್ನು ಸಂರಕ್ಷಿಸುವುದು, ಅಕಾಲದಲ್ಲಿ ಬಿದ್ದ ಮಳೆಯ ನೀರನ್ನು ಸಮರ್ಥ ರೀತಿಯಲ್ಲಿ ಶೇಖರಿಸಿ ಸೂಕ್ತ ಬಳಕೆ ಮಾಡುವುದು, ಅಲ್ಪ ಕಾಲಿಕ ವ್ಯವಸ್ಥೆಗಳು. ನೀರು ಇಂಗಿಸುವ ಸುಲಭ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳುವುದು, ಕಡಿಮೆ ಮಳೆಯಾಗುವ ಪ್ರದೇಶಗಳಲ್ಲಿ ಖುಷ್ಕಿ ಬೇಸಾಯಕ್ಕೆ ಆದ್ಯತೆ ಕೊಡುವುದು, ವೈಜ್ಞಾನಿಕ ರೀತಿಯಲ್ಲಿ ಬೇಸಾಯ ಪದ್ಧತಿಗಳನ್ನು ಅಳವಡಿಸಿ ಕೊಳ್ಳುವುದು ಇತ್ಯಾದಿ.,

ಮಳೆಯಿಲ್ಲದೆ ಬೆಳೆ ಇಲ್ಲ, ಬೆಳೆ ಇಲ್ಲದೆ ಬರಗಾಲ, ಬರಗಾಲದಿಂದ ಜೀವನ ದುಸ್ತರ, ಎಲ್ಲದುದಕ್ಕೂ ಮಳೆಯೇ ಅತಿ ಮುಖ್ಯ ಪಾತ್ರ ವಹಿಸುತ್ತದೆ. ಹಾಗಾದರೆ ಮಳೆ ಯಾಕೆ ಕಡಿಮೆಯಾಗಿದೆ ಎಂದು ಅರಿತು ಮಳೆಯ ಪ್ರಮಾಣವನ್ನು ಹೆಚ್ಚಿಸಲು ನಾವೇನು ಮಾಡಬಹುದು? ಅನಾವೃಷ್ಟಿ ತಡೆಯಲು ನಮ್ಮ ಕಾಣಿಕೆಯೇನು? ನಮ್ಮ ಮನೆಯ ಸುತ್ತ–ಮುತ್ತ ಹೊಲಗದ್ದೆಗಳಲ್ಲಿ ಮರಗಿಡಗಳನ್ನು ಬೆಳೆಸಲು ಸಾಧ್ಯವಾ? ನೀರನ್ನು ಮಿತವಾಗಿ ಬಳಸುವ ಬಗ್ಗೆ ನಾವರಿತು ಸುತ್ತಮುತ್ತಲಿನ ಜನರಿಗೆ ತಿಳಿಸೋಣವೇ? ಕಾಡನ್ನು ಉಳಿಸಿ ನಾಡನ್ನು ರಕ್ಷಿಸೋಣವೇ?

**ಗಾಂಧೀಜಿಯವರು ಹೇಳಿದಂತೆ – ಈ ಧರಿತ್ರಿ ನಮ್ಮೆಲ್ಲರ ಅವಶ್ಯಕತೆಗಳನ್ನು ಪೂರೈಸಲು ಸಶಕ್ತಳು; ಆದರೆ ನಮ್ಮ ಅತಿ ಆಸೆಗಳನ್ನಲ್ಲ, ಎಂಬುದು ಇಂದಿಗಾದರೂ ನಮಗೆ ಮನವರಿಕೆಯಾಗಬೇಕು.**

ಫಾ. ಸೆಬಾಸ್ಟಿಯನ್ ಫೆರ್ನಾಂಡಿಸ್
ನಿರ್ದೇಶಕರು, ಕ್ರಾಸ್ ಸಂಸ್ಥೆ.

# ಬಾರದ ಮಳೆ – ಬರದ ಛಾಯೆ

ವರ್ಗೀಸ್ ಜಿ.ಎಲ್.

ಜಗತ್ತಿನ ಸೃಷ್ಟಿಕರ್ತನಾದ ಭಗವಂತ, ಈ ಲೋಕವನ್ನು ನಿರ್ಮಿಸಿ, ಮಾನವನ ವಶಕ್ಕೆ ನೀಡಿದರು. ದೇವರ ದೃಷ್ಟಿಯಲ್ಲಿ ಅವರು ಸೃಷ್ಟಿಮಾಡಿದ ಈ ಭೂಮಿ ಮತ್ತು ಮಾನವ ಒಂದೇ ಕುಟುಂಬದ ಸದಸ್ಯರಂತೆ ಅನ್ಯೋನ್ಯವಾಗಿ ಜೀವಿಸಬೇಕೆಂಬುದನ್ನು ಸ್ಪಷ್ಟಪಡಿಸುತ್ತವೆ.

ಕಾಲಕ್ರಮೇಣ ಮಾನವ ಸೃಷ್ಟಿಕರ್ತನ ಆಶಯಗಳನ್ನು ಧಿಕ್ಕರಿಸಿ ತನ್ನ ಸ್ವಾರ್ಥ ಹಿತಕ್ಕೋಸ್ಕರ ಭೂಮಿಯನ್ನು ನಾಶಮಾಡತೊಡಗಿದ. ಪ್ರಾಣಿ ಪಕ್ಷಿಗಳನ್ನು ಯಥೇಚ್ಛವಾಗಿ ಬೇಟೆಯಾಡಿ ಅವುಗಳನ್ನು ನಿರ್ನಾಮಗೊಳಿಸಿದ. ಮರಗಿಡ-ಅರಣ್ಯವನ್ನು ಕಡಿದು ಧ್ವಂಸಮಾಡಿ ಬಟಬಯಲಾಗಿಸಿದ. ಆ ಜಾಗದಲ್ಲಿ ಕಾಂಕ್ರೀಟಿನ ಕಾಡುಗಳನ್ನು ನಿರ್ಮಿಸಿದ. ವಾತಾವರಣವನ್ನು ಕಲುಷಿತಗೊಳಿಸಿದ. ಒಟ್ಟಿನಲ್ಲಿ ವಸುಧೆಯನ್ನು ಕ್ರಮಭದ್ಧವಾಗಿ ನಾಶಪಡಿಸಲಾಗುತ್ತಿದೆ. ಈ ಪ್ರಕ್ರಿಯೆ ಇತ್ತೀಚೆಗಂತು ಅಭಿವೃದ್ಧಿಯ ಕುಂಟು ನೆಪವೊಡ್ಡಿ ಅಡಚಣೆಯಿಲ್ಲದೆ ಅವ್ಯಾಹತವಾಗಿ ನಡೆಯುತ್ತಿದೆ. ಒಂದು ಕಾಲದಲ್ಲಿ ಕ್ರಮಬದ್ಧವಾಗಿ ನಡೆಯುತ್ತಿದ್ದ ಭೂಮಿಯ ಕಾಲ ಚಕ್ರ ಮನುಷ್ಯನ ಅನಗತ್ಯ ಹಸ್ತಕ್ಷೇಪದಿಂದಾಗಿ ವ್ಯತ್ಯಯಗೊಂಡು, ಪ್ರಕೃತಿವಿಕೋಪಗೊಂಡು ಮಳೆಯ ಕೊರತೆ, ಭೌಗೋಳಿಕ ತಾಪಮಾನ ಏರಿಕೆಯಾಗಿ, ಕೇಳರಿಯದ ರೋಗರುಜಿನಗಳು ಮತ್ತಿತರ ಆಘಾತಗಳು ಜಗವನ್ನೆಲ್ಲ ಪಸರಿಸಿಕೊಂಡಿವೆ.

ನಮ್ಮ ಭಾರತ ದೇಶಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಹವಾಮಾನ ಸಮಸ್ಯೆಯ ಕುರಿತು ಗಮನಿಸಿದಾಗ ಮುಂದೆ ಆಗಬಹುದಾದ ಕಷ್ಟಕೋಟಲೆಗಳ ಕಲ್ಪನೆ ಬರಬಹುದು. ಭೂಮಿಯ ಮೇಲ್ಪದರದ ತಾಪಮಾನ 2 ರಿಂದ 5 ಸೆಲ್ಸಿಯಸ್ ಏರಿಕೆಯಾಗಲಿದೆ. ವಾರ್ಷಿಕ ಮಳೆಯ ಪ್ರಮಾಣದಲ್ಲಿ ಶೇಕಡ 20 ರಷ್ಟು ಹೆಚ್ಚಳವಾಗುವುದು. ಹೀಗೆ ಆದರೆ ಮಳೆ ಬೀಳುವ ಪ್ರದೇಶಗಳಲ್ಲಿ ಇನ್ನೂ ಹೆಚ್ಚು ಮಳೆ ಬೀಳಲಿದೆ. ಒಣ ಪ್ರದೇಶಗಳು ಮತ್ತಷ್ಟು ಬಿಸಿಯಾಗಲಿವೆ. ಹವಾಮಾನದಲ್ಲಿ ಇಂತಹ ಬದಲಾವಣೆಯಾದಾಗ ಅದರಿಂದ ಧಾನ್ಯಗಳು, ತರಕಾರಿ ಮತ್ತು ಇತರ ಕೃಷಿ ಉತ್ಪನ್ನಗಳು ಕುಂಠಿತಗೊಳ್ಳುತ್ತವೆ. ಇದರಿಂದ ಆದಾಯದಲ್ಲಿ ಆಗುವ ವಾರ್ಷಿಕ ನಿವ್ವಳ ನಷ್ಟ ಶೇ. 9 ರಿಂದ 25 ಎಂದು ಅಂದಾಜಿಸಲಾಗುತ್ತಿದೆ. ಅರಣ್ಯ ಇಲಾಖೆಯ ಅಂದಾಜಿನಂತೆ, 2085ರ ಒಳಗೆ 68-77ರಷ್ಟು ಅರಣ್ಯ ಪ್ರದೇಶಗಳ ಸ್ವರೂಪವೇ ಬದಲಾಗುವುದರಿಂದ ದೊಡ್ಡ ಪ್ರಮಾಣದಲ್ಲಿ ಅರಣ್ಯ ಹಾಗೂ ಜೀವ ಸಂಕುಲ ನಾಶವಾಗಲಿದೆ. ಇನ್ನು ಆರೋಗ್ಯ ವಲಯದ ಬಗ್ಗೆ ಹೇಳ ಬೇಕಾದರೆ, ಈ ವಲಯ, ಮಲೇರಿಯದಂತಹ ಸಾಂಕ್ರಾಮಿಕ ರೋಗಗಳು, ಇದುವರೆಗೆ ಈ ಸಾಂಕ್ರಾಮಿಕ ರೋಗದಿಂದ ಮುಕ್ತವಾಗಿರುವ ಪ್ರದೇಶಕ್ಕೂ ಸ್ಥಳಾಂತರವಾಗಲಿವೆ. ಸಾಂಕ್ರಾಮಿಕ ಜಾಡ್ಯ, ಅತಿ ಸಾರದಿಂದ ಉಂಟಾಗುವ ಸಾವುಗಳು, ಮತ್ತು ಕಾಲರಾದಂತಹ ರೋಗಗಳ ತೀವ್ರತೆ ಹಾಗೂ ವ್ಯಾಪಕತೆ ಆರೋಗ್ಯ ವಲಯಕ್ಕೆ ಹೆಚ್ಚಿನ ಆಘಾತ ಉಂಟು ಮಾಡಲಿವೆ.

ಭಾರತ ದೇಶದಲ್ಲಿ ಅರಣ್ಯ, ಕೃಷಿ, ಮೀನುಗಾರಿಕೆಯಂತಹ ಕ್ಷೇತ್ರಗಳು, ಈಗಾಗಲೇ ಸಾಮಾಜಿಕ ಆರ್ಥಿಕ ಒತ್ತಡಕ್ಕೀಡಾಗಿದ್ದು ಹವಾಮಾನ ಬದಲಾವಣೆಯಿಂದ ಈ ಕ್ಷೇತ್ರಗಳು ತೀವ್ರತರ ದುಷ್ಪರಿಣಾಮ ಅನುಭವಿಸುತ್ತಿದೆ. ಹವಾಮಾನ ಬದಲಾವಣೆಯಿಂದ ದೇಶದ ಜೀವ ವೈವಿಧ್ಯತೆ (ಜೀವ ಸಂಕುಲಕ್ಕೆ) ಮತ್ತು ಜೈವಿಕ ಸಸ್ಯ ಸಂಪತ್ತು ಮತ್ತು ಪರಿಸರ ನಡುವಣ ಸಮತೋಲನ ಏರುಪೇರಾಗಿದೆ.

ನಲವತ್ತು ವರ್ಷಗಳಲ್ಲಿಯೇ ಅತ್ಯಂತ ಭೀಕರ ಬರಗಾಲವನ್ನು 2015 ನೇ ಸಾಲಿಗೆ ಕರ್ನಾಟಕ ಎದುರಿಸುತ್ತಿದೆ. ಈ (2015ನೇ) ಸಾಲಿನಲ್ಲಿ ಮುಂಗಾರು ಮಳೆಯ ಕೊರತೆ ಶೇಕಡ 15 ನ್ನು ಮೀರಲಿದೆ ಎಂದು ಅಂದಾಜಿಸಲಾಗಿದೆ. ಇದು ಮುಂಗಾರು ಬೆಳೆ ಮತ್ತು ಗ್ರಾಮೀಣ ಆದಾಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಚಿಂತಿಸಲಾಗುತ್ತಿದೆ. ಕರ್ನಾಟಕ ಸರ್ಕಾರ ಈಗಾಗಲೇ 30 ಜಿಲ್ಲೆಗಳ ಪೈಕಿ 27 ಜಿಲ್ಲೆಗಳ 136 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ರಾಜ್ಯದಲ್ಲಿ ಕಳೆದ ವರ್ಷ ಶೇಕಡಾ 95ರಷ್ಟು ಜಲಾಷಯಗಳು ತುಂಬಿತ್ತು ಆದರೆ, ಈ ಬಾರಿ ಶೇಕಡಾ 50ರಷ್ಟು ಜಲಾಷಯಗಳಲ್ಲಿ ನೀರಿಲ್ಲ. ಇದರಿಂದ 3380 ಮೆಗಾವ್ಯಾಟ್ ವಿದ್ಯುತ್ ಕೊರತೆಯೂ ಎದುರಾಗಿದೆ. ಬರದಿಂದಾಗಿ ಸುಮಾರು 14,471 ಕೋಟಿ ರೂ. ಮೌಲ್ಯದ ಕೃಷಿ ಬೆಳೆ ಹಾಗೂ 1164 ಕೋಟಿ ರೂ. ಮೌಲ್ಯದ ತೋಟಗಾರಿಕಾ ಬೆಳೆಯೂ ಸೇರಿದಂತೆ ಸುಮಾರು 16000 ಕೋಟಿ ರೂಪಾಯಿಗಳ ನಷ್ಟ ಉಂಟಾಗಿ ರೈತರು ಕಂಗಾಲಾಗಿದ್ದಾರೆ. (ಮೂಲ ಅಂಕಿ ಅಂಶ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ-ಕರ್ನಾಟಕ ಸರಕಾರ-11/09/2015). ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಇದುವರೆಗೆ 477 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾಲದ ಶೂಲದ ಜೊತೆಗೆ ರಾಜ್ಯದಲ್ಲಿ ಭೀಕರ ಬರ ತಲೆದೋರಿರುವ ಕಾರಣ ರೈತರ ಸಂಕಷ್ಟ ಇನ್ನಷ್ಟು ಹೆಚ್ಚಿದೆ. ಮಂಡ್ಯ ಜಿಲ್ಲೆಯಲ್ಲಿ 47 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾವೇರಿಯಲ್ಲಿ 35, ತುಮಕೂರು 33, ಮೈಸೂರಿನಲ್ಲಿ 28, ಬೆಳಗಾವಿ 25, ಹಾಸನ 24, ಚಿಕ್ಕಮಗಳೂರಿನಲ್ಲಿ 23, ರಾಯಚೂರಿನಲ್ಲಿ 22 ಹೀಗೆ ರೈತರು ಆತ್ಮಹತ್ಯೆ ಪ್ರಕರಣ ಪಟ್ಟಿ ಬೆಳೆಯುತ್ತದೆ. (ಆಧಾರ: ಕನ್ನಡಪ್ರಭ 16/09/2015). ಅನ್ನದಾತರು ಆತ್ಮಹತ್ಯೆಗೆ ಹೆಚ್ಚು ಹೆಚ್ಚು ಮೊರೆ ಹೋಗುವ ಮುಂಚೆ ಇದರ ಬಗ್ಗೆ ಎಚ್ಚೆತ್ತುಕೊಳ್ಳುವುದು ಅನಿವಾರ್ಯ. ಸರಕಾರ ಮತ್ತು ಸರಕಾರೇತರ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯವೆಸಗಬೇಕಾಗಿದೆ. ಈ ನಿಟ್ಟಿನಲ್ಲಿ ಸರಕಾರ ತಜ್ಞರು ಸಮಿತಿಯನ್ನು ರಚಿಸಿ ಒಂದು ಸೂಕ್ತವಾದ ಕಾರ್ಯಯೋಜನೆಯನ್ನು ರೂಪಿಸುವುದು ಅತೀ ಶೀಘ್ರವಾಗಿ ಆಗಬೇಕಾಗಿದೆ.

**ಬರದಿಂದ ವಸುದೈವಕುಟುಂಬಕ್ಕೆ ಉಂಟಾಗುವ ಪರಿಣಾಮಗಳು:**

ಕೋಟ್ಯಾಂತರ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ನೀರು ಪೂರೈಕೆ ಮಾಡುವ ಜಲಾಷಯಗಳು, ಕೆರೆಗಳು ಭರ್ತಿಯಾಗದೆ, ಪಾತಾಳಕ್ಕೆ ಕುಸಿದಿರುವ ಅಂತರ್ಜಲ ಮಟ್ಟ. ಈ ಭಾಗದಲ್ಲಿ ಒಂದೆರಡು ವರ್ಷ ಮಳೆಯಾಗದಿದ್ದರೆ, ಅಂತರ್ಜಲ ಕುಸಿದು ಪಂಪ್‌ಸೆಟ್ ಆಧಾರಿತ ನೀರಾವರಿ ಮಾಡುವ ರೈತರು ಆತಂಕದಲ್ಲಿ ಕಾಲ ಕಳೆಯಬೇಕಾಗುತ್ತದೆ. ನಮ್ಮ ದೇಶದ ಶೇಕಡ 70 ರಷ್ಟು ಜನ ಗ್ರಾಮೀಣ ಭಾಗದಲ್ಲಿ ವಾಸಿಸುತ್ತಿದ್ದು ಕೃಷಿಯನ್ನೇ ಆಧರಿಸಿ ಜೀವಿಸುತ್ತಿದ್ದಾರೆ. ನಮ್ಮ ದೇಶದ ಕೃಷಿ ಒಂದು

ನಿರ್ದಿಷ್ಟ ವಾತಾವರಣಕ್ಕೆ ಹೊಂದಿಕೊಂಡಿದ್ದು, ಇತ್ತೀಚಿನ ದಿನಗಳಲ್ಲಿ ವಾತಾವರಣದಲ್ಲಾಗುವ ಅನಿರೀಕ್ಷಿತ ಬದಲಾವಣೆಗೆ ಹೊಂದಿಕೊಳ್ಳಲಾಗದೆ ಕೃಷಿ ಕಸುಬು ಕಷ್ಟವಾಗುತ್ತಿದೆ. ಈ ರೀತಿಯ ಹವಾಮಾನ ಬದಲಾವಣೆಯಿಂದ ಆಗುವ ಪರಿಣಾಮಗಳಾವುವೆಂದರೆ ಕೆಲವು ಕಡೆ ಬಿಸಿಲಿನ ಅವಧಿ ಹೆಚ್ಚಾಗಿ ಬೆಳೆಗಳ ಬೆಳೆಯುವ ಅವಧಿ ಹೆಚ್ಚಾಗುತ್ತದೆ. ಕೆಲವು ಬೆಳೆಗಳು ಹೆಚ್ಚಾದ ಶಾಖವನ್ನು ತಡೆಯಲಾರದೆ ಇಳುವರಿ ಕುಂಠಿತವಾಗುತ್ತದೆ. ಮಳೆಯಿಲ್ಲದೆ ಕೃಷಿಯಿಲ್ಲ. ಕೃಷಿಯಿಲ್ಲದೆ ಬೆಳೆಯಿಲ್ಲ. ಬೆಳೆಯಿಲ್ಲದೆ ಆಹಾರವಿಲ್ಲ, ಆಹಾರವಿಲ್ಲದೆ ಜೀವವಿಲ್ಲ, ಜೀವವಿಲ್ಲದೆ ಮನುಷ್ಯನಿಲ್ಲ.

ಚಳಿಪ್ರದೇಶಗಳಲ್ಲಿ ಕೃಷಿಯ ಭೂಮಿ ವಿಸ್ತಾರವಾಗುತ್ತದೆ. ವಾತಾವರಣದಲ್ಲಿನ ಶಾಖ ಹೆಚ್ಚಾಗಿ ಸಮುದ್ರದ ನೀರಿನ ಗಾತ್ರ ದೊಡ್ಡದಾಗಿ ಹಾಗೂ ಕೆಲವು ಕಡೆಯ ನೀರ್ಗಲ್ಲು (ಮಂಜುಗಡ್ಡೆ) ಕರಗಿ ಸಮುದ್ರದ ಮಟ್ಟ ಹೆಚ್ಚಾಗಿ ತಗ್ಗು ಪ್ರದೇಶಗಳು ಮುಳುಗುವ ಸಾಧ್ಯತೆಯಿದ್ದು ಕೃಷಿಭೂಮಿ ಕಡಿಮೆಯಾಗುತ್ತದೆ. ಹವಾಮಾನದಲ್ಲಿ ತೀಕ್ಷ್ಣ ಬದಲಾವಣೆ, ವಿಪರೀತ ಏರಿಳಿತ, ಋತುಮಾನದಲ್ಲಿ ಬದಲಾವಣೆ, ಮಳೆಗಾಲದ ಆರಂಭ ಮತ್ತು ಅಂತ್ಯದಲ್ಲಿ ಬದಲಾವಣೆ, ಮಳೆಯವಿತರಣೆಯಲ್ಲಿ ಏರುಪೇರು, ಅಧಿಕ, ಅನಿರೀಕ್ಷಿತ ಹಾಗೂ ತೀಕ್ಷ್ಣ ಚಂಡಮಾರುತಗಳು, ದೀರ್ಘಕಾಲದ ಬರಗಾಲ, ಆವಿಯಾಗುವ ನೀರಿನ ಪ್ರಮಾಣದಲ್ಲಿ ಏರಿಳಿತ, ಭೂಮಿಯಲ್ಲಿ ನೀರಿನ ಕೊರತೆ ಈ ರೀತಿಯ ಹತ್ತು ಹಲವು ತೊಂದರೆಗಳು ಕೃಷಿಗೆ ತೊಡಕಾಗುತ್ತವೆ. ಆದರೆ ಈ ರೀತಿಯ ಅನಿರೀಕ್ಷಿತ ಬದಲಾವಣೆಗಳನ್ನು ಎದುರಿಸುವ ಶಕ್ತಿ ಅಭಿವೃದ್ಧಿ ಹೊಂದಿದ ದೇಶಗಳಿಗಿದ್ದು, ಭಾರತದಂತಹ ಅಭಿವೃದ್ಧಿಯಾಗುತ್ತಿರುವ ದೇಶಗಳಿಗೆ ಇಂತಹ ಅನಿರೀಕ್ಷಿತ ಬದಲಾವಣೆಗಳು ಮಾರಕವಾಗುತ್ತವೆ.

**ಬರ ಪರಿಸ್ಥಿತಿಯನ್ನು ಗುರುತಿಸಲು ಅನುಸರಿಸಲಾಗುತ್ತಿರುವ ಪ್ರಮುಖ ಮಾನದಂಡಗಳು:**

- ಶೇಕಡ 20% ಕ್ಕೂ ಹೆಚ್ಚಿನ ಮಳೆ ಕೊರತೆ
- ಸತತ 4 ವಾರಗಳ ಶುಷ್ಕ ವಾತಾವರಣ (ವಾಡಿಕೆ ಮಳೆ ಪ್ರಮಾಣವನ್ನು ಹೋಲಿಸಿದಾಗ ಶೇಕಡ 50% ಕ್ಕೂ ಅಥವಾ ಅದಕ್ಕಿಂತ ಕಡಿಮೆ ಮಳೆಯಾದ ವಾರಗಳು)
- ತೇವಾಂಶ ಕೊರತೆ ಸೂಚ್ಯಂಕ (ಶೇಕಡ 50% ಕ್ಕಿಂತ ಕಡಿಮೆ)
- ಬಿತ್ತನೆಯ ಗುರಿಗಿಂತ ಶೇಕಡ 50%ರಷ್ಟು ಕಡಿಮೆ ಬಿತ್ತನೆಯಾದ ಪ್ರದೇಶದಲ್ಲಿ ಶುಷ್ಕ ವಾತಾವರಣದಿಂದ ಶೇಕಡ 33% ಕ್ಕಿಂತ ಅಧಿಕ ಬೆಳೆ ನಾಶವಾದ ಪ್ರದೇಶ.

**ಬರ ಉಂಟಾಗಲು ಕಾರಣಗಳೇನು?**

ದಿನ ಉರುಳಿ, ವರ್ಷಗಳು ಕಳೆದಂತೆ, ಕಾಲ, ಋತು ಚಕ್ರಗಳು ಬದಲಾಗುತಲಿದ್ದು, ನಿಸರ್ಗ ಸಹನೆ ಕಳೆದುಕೊಂಡಿದೆ. ಅತಿಯಾದ ರಾಸಾಯನಿಕಗಳು, ಅವೈಜ್ಞಾನಿಕ ಪದ್ಧತಿಗಳು, ನೀರಾವರಿ ಮತ್ತು ಕೀಟನಾಶಕಗಳ ದುರ್ಬಳಕೆಯಿಂದ ಭೂಮಿಯಲ್ಲಿ ತಾಪಾಂಶ ಹೆಚ್ಚಿದೆ. ಸಾವಯವ ವಸ್ತುಗಳ ಪ್ರಮಾಣ ಮಣ್ಣಿನಲ್ಲಿ ಕಡಿಮೆಯಾಗಿ ಕೇವಲ ರಾಸಾಯನಿಕಗಳಿಗೆ ಜೋತುಬಿದ್ದುದರ ಪರಿಣಾಮವಾಗಿ ಅಂತರ್ಜಲ ಕುಸಿದಿದೆ. ಮಣ್ಣು ಸತ್ವ ಕಳೆದುಕೊಂಡಿದೆ. ಕೀಟ ರೋಗಗಳಿಗೆ ಪ್ರತಿರೋಧಕ ಶಕ್ತಿ ಬೆಳೆಗಳಲ್ಲಿ ಕುಂದಿಹೋಗಿದೆ. ಸಕಲ ಜೀವ ಸಂಕುಲಗಳ ಸಮಬಾಳ್ವೆ ಭೂಮಿಯ ಮೇಲೆ ಮರೀಚಿಕೆಯಾಗಿದೆ. ಎಷ್ಟೆಷ್ಟು ರಾಸಾಯನಿಕ ಗೊಬ್ಬರ ಬಳಸಿದರೂ ಸರಿಯಾದ ಫಲಿತಾಂಶ ಇಳುವರಿಯಿಂದ ದೊರೆಯುತ್ತಿಲ್ಲ. ಭೂಮಿಯ ಸದ್ಗುಣಗಳಲ್ಲಿ ಉತ್ಪಾದನೆ– ಉತ್ಪಾದಕತೆ ಹೆಚ್ಚಿಸುವುದರ ಜೊತೆಗೆ ಮುಂದಿನ ಪೀಳಿಗೆಗೂ ಈ ಭೂಮಿಯನ್ನು ಉಳಿಸಿಕೊಳ್ಳುವ ಪರಿಸರ ಪ್ರೇಮಿ ವಿಧಾನಗಳು ಕಣ್ಮರೆಯಾಗಿರುವುದಂತೂ ಶೋಚನೀಯ!

ಇಂದಿನ ಸಮಾಜ ಹೆಚ್ಚು ಹೆಚ್ಚು ಇಂಧನ ಉರಿಸುವುದರಿಂದ ಇಂಗಾಲದ ಅಂಶವುಳ್ಳ ಹಲವು ರಸಾಯನಿಕ ವಸ್ತುಗಳನ್ನು ಮಾನವ ವಾತಾವರಣಕ್ಕೆ ಸೇರಿಸುತ್ತಿದ್ದಾನೆ. ಈ ಹಸಿರುಮನೆ ಅನಿಲಗಳ ಪ್ರಮಾಣ ವಾತಾವರಣದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗುತ್ತಿದೆ. ಈ ಅನಿಲಗಳು, ವಾತಾವರಣದಲ್ಲಿ ಸೂರ್ಯನ ಕಿರಣಗಳನ್ನು ಮತ್ತು ಭೂಮಿಯಿಂದ ಹೊರಹೋಗುವ ಶಾಖಾಂಶವನ್ನು ತಮ್ಮಲ್ಲಿ ಹಿಡಿದಿಟ್ಟುಕೊಂಡು ವಾತಾವರಣದಲ್ಲಿನ ಉಷ್ಣಾಂಷವನ್ನು ಹೆಚ್ಚಿಸುವುದರಿಂದ ವಾತಾವರಣದಲ್ಲಿನ ತಾಪಮಾನಏರಿಕೆಯಾಗುತ್ತದೆ. ಇದನ್ನು ಜಾಗತಿಕ ತಾಪಮಾನ ಏರಿಕೆ ಎನ್ನುತ್ತೇವೆ. 1880 ರಿಂದ 1981 ರವರೆಗೆ ಕೇವಲ ಒಂದು ಡಿಗ್ರಿ ಸೆಲ್ಸಿಯಸ್ ಏರಿಕೆಯಾಗಿದ್ದು ಕಳೆದ 25ರಿಂದ 35 ವರ್ಷಗಳಲ್ಲಿ ಅಂದರೆ 1981 ರಿಂದೀಚೆಗೆ 1.5 ಡಿಗ್ರಿ ಸೆಲ್ಸಿಯಸ್ ಏರಿದೆ. ಈ ರೀತಿಯ ತಾಪಮಾನದ ಏರಿಕೆ 100 ವರ್ಷಗಳಲ್ಲಿ ಕೇವಲ ಒಂದು ಡಿಗ್ರಿ ಸೆಲ್ಸಿಯಸ್ ಏರಿದ್ದು ಕಳೆದ ಕೇವಲ 35 ವರ್ಷಗಳಲ್ಲಿ ಒಂದೂವರೆ ಡಿಗ್ರಿ ಸೆಲ್ಸಿಯಸ್ ಏರಿದೆ. ಅಂದರೆ, ತಾಪಮಾನದ ಏರಿಕೆ ಇತ್ತೀಚಿನ ದಿನಗಳಲ್ಲಿ ತೀವ್ರಗತಿಯಲ್ಲಿ ಏರುತ್ತಿದೆ. ಏರಿಕೆಯ ಪ್ರಮಾಣ ಕಡಿಮೆಯಿದ್ದಾಗ ಭೂಮಂಡಲದಲ್ಲಿ ಋತುಮಾನದ ಬದಲಾವಣೆ, ಮಳೆಯ ಆರಂಭ ಮತ್ತು ಅಂತ್ಯ ಹಾಗೂ ವಿತರಣೆ ಎಲ್ಲವು ಕರಾರುವಕ್ಕಾಗಿ ನಡೆಯುತ್ತಿತ್ತು. ಒಳ್ಳೆಯ ಮಳೆ ಬೆಳೆಯಾಗಿತ್ತಿತ್ತು. ತಾಪಮಾನದ ಏರಿಕೆ ಭೂಮಿಯ ಎಲ್ಲಾಭಾಗದಲ್ಲು ಒಂದೇ ಸಮನಾಗಿರದೆ ಬೇರೆಬೇರೆ ಸ್ಥಳಗಳಲ್ಲಿ ಬೇರೆಬೇರೆ ಇರುತ್ತದೆ. ಈ ತಾಪಮಾನದ ಏರಿಕೆಯಿಂದ ಒತ್ತಡದಲ್ಲಿ ಇಳಿಕೆಯಾಗಿ ಸ್ಥಳದಿಂದ ಸ್ಥಳಕ್ಕೆ ಒತ್ತಡದ ವ್ಯತ್ಯಾಸ ಉಂಟಾಗುತ್ತದೆ. ಈ ಒತ್ತಡದ ವ್ಯತ್ಯಾಸದಿಂದ ರಭಸವಾದ ಗಾಳಿಯು ಒಂದುಕಡೆಯಿಂದ ಮತ್ತೊಂದುಕಡೆಗೆ ಚಲಿಸುತ್ತದೆ. ಈ ರೀತಿಯ ಅನಿರೀಕ್ಷಿತ ಪ್ರಮಾಣದ ಗಾಳಿಯು ಭೂಮಿಯ ಎಲ್ಲಾ ಭಾಗದಲ್ಲು ಬೀಸುವುದರಿಂದ ಯಾವಾಗ ಎಷ್ಟು ಪ್ರಮಾಣದ ಗಾಳಿಬೀಸುತ್ತದೆ, ಎಷ್ಟು ಮಳೆ ತರುತ್ತದೆ ಎನ್ನುವುದು ಊಹಿಸಲು ಅಸಾಧ್ಯವಾಗಿದೆ.

**ಬರ ಪರಿಸ್ಥಿತಿ ಎದುರಿಸಲು ಸರಕಾರ ತೆಗೆದುಕೊಂಡ ಕ್ರಮಗಳು**

ನಮ್ಮ ಕರ್ನಾಟಕ ಸೇರಿದಂತೆ ಭಾರತದೇಶದ ಅರ್ಧ ಭಾಗದಲ್ಲಿ ಬರ ಪರಿಸ್ಥಿತಿ ಇದೆ. ನಮ್ಮ ರಾಜ್ಯದಲ್ಲಿ ತಲೆದೋರಿರುವ ಅತೀ ಭೀಕರ 'ಬರ' ದ ಈ ಸಂದರ್ಭದಲ್ಲಿ ಜನರ ನೆರವಿಗೆ ಸರ್ಕಾರ ಧಾವಿಸಿದೆ. ಅವರ ಸಂಕಷ್ಟಗಳಿಗೆ ಮಾನವೀಯವಾಗಿ ಸ್ಪಂದಿಸಲು ಯತ್ನಿಸುತ್ತಿದೆ. ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ರಾಜ್ಯ ಸರಕಾರದ ಬೊಕ್ಕಸದಿಂದ 447 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಬರಪೀಡಿತ ಪ್ರದೇಶಗಳಿಗೆ ತುರ್ತು ಕುಡಿಯುವ ನೀರು ಸರಬರಾಜು

ಹಾಗೂ ಗೋಶಾಲೆ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಕುಡಿಯುವ ನೀರಿನ ಸಾಗಾಣೆಕೆಯನ್ನು ಅಗತ್ಯತೆಯ ಅನುಗುಣವಾಗಿ 90 ದಿವಸಗಳಿಗೆ ಮೀರಿ ವಿಸ್ತರಿಸಲು ಸರಕಾರ ನಿರ್ಧರಿಸಿ ಕ್ರಮ ಕೈಗೊಳ್ಳಲು ಆದೇಶ ನೀಡಲಾಗಿದೆ. 2015ರ ಏಪ್ರಿಲ್‌ನಿಂದ ಈವರೆಗೆ ಅನೇಕ ಕಡೆ ಗೋಶಾಲೆಗಳನ್ನು ತೆರೆಯಲಾಗಿದ್ದು ಮೇವು ಕೊರತೆ ಇರುವ ಜಿಲ್ಲೆಗಳಿಗೆ ಮೇವು ಲಭ್ಯವಿರುವ ಜಿಲ್ಲೆಗಳಿಂದ ಸಾಗಾಣಿಕೆಗೆ ಅನುಮತಿ ನೀಡಿದ್ದು ಕಾರ್ಯ ನಿರ್ವಹಿಸುತ್ತಿವೆ. ಇನ್ಪುಟ್ ಸಬ್ಸಿಡಿ ಅನುದಾನವನ್ನು ಕೂಡಲೇ ವಿತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. 2015ನೇ ಸಾಲಿನಲ್ಲಿ ಬರಗಾಲದಿಂದ ಬೆಳೆಹಾನಿಯಾದ್ದಕ್ಕೆ ರೈತರಿಗೆ ಸಬ್ಸಿಡಿ ನೀಡಲು ಕೇಂದ್ರ ಸರ್ಕಾರದಿಂದ 16,000 ಕೋಟಿ ರೂಪಾಯಿಗಳು ಬಿಡುಗಡೆಗೆ ಒತ್ತಾಯಿಸಲಾಗಿದೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ರೈತರು ಪಡೆದ ಸಾಲ ಮರುಪಾವತಿ ಅವಧಿ ವಿಸ್ತರಿಸಲು ಕರ್ನಾಟಕ ಸರ್ಕಾರ ಬ್ಯಾಂಕುಗಳಿಗೆ ಸೂಚಿಸಲಾಗಿದೆ. ಸ್ವ ಸಹಾಯ ಸಂಘಗಳಿಗೆ ಇದುವರೆಗೆ ರೂ.1.25 ಲಕ್ಷ ಸಾಲ ನೀಡಲಾಗುತ್ತಿದ್ದು ಈ ಸಾಲದ ಮೊತ್ತವನ್ನು ಈಗ ರೂ.2.75 ಲಕ್ಷಕ್ಕೆ ಏರಿಕೆ ಮಾಡಬೇಕೆಂದು ನಬಾರ್ಡ್‌ಗೆ ವಿನಂತಿಸಲಾಗಿದ್ದು ಇದನ್ನು ನಬಾರ್ಡ್ ಇತರ ಬ್ಯಾಂಕುಗಳಿಗೆ ಸಲಹೆ ನೀಡಿದೆ.

ಬರದ ಸಂಧರ್ಭದಲ್ಲಿ ಉಂಟಾಗಬಹುದಾದ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮುಂಜಾಗೃತಾ ಕ್ರಮಗಳನ್ನು ಕೈಗೊಂಡು ವೈದ್ಯರ ಹಾಜರಾತಿ, ಔಷಧಿಗಳ ದಾಸ್ತಾನು ಇತ್ಯಾದಿಗಳ ಮೇಲೆ ನಿಗಾವಹಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಸೂಕ್ತ ಕ್ರಮವಹಿಸಲು ಸೂಚನೆ ನೀಡಲಾಗಿದೆ.

ಬರಕ್ಕೆ ತುತ್ತಾಗಿರುವ ಪ್ರದೇಶಗಳಲ್ಲಿ ಕಾರ್ಮಿಕರಿಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸದ ದಿನಗಳನ್ನು ಈಗಿರುವ 100ರಿಂದ 150ಕ್ಕೆ ಹೆಚ್ಚಿಸಲಾಗಿದೆ. ಇದರಿಂದ ರಾಜ್ಯಗಳು ಬರಪೀಡಿತ ಪ್ರದೇಶಗಳಲ್ಲಿ ಕಾರ್ಮಿಕರಿಗೆ ಹೆಚ್ಚು ಕೆಲಸದ ದಿನಗಳನ್ನು ನೀಡಬಹುದಾಗಿದೆ. ಗ್ರಾಮೀಣ ಪ್ರದೇಶದ ಜನರಿಗೆ ಇದರಿಂದ ಅನುಕೂಲವಾಗಲಿದೆ. ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರವು ಬರ ಪರಿಸ್ಥಿತಿಯನ್ನು ನಿಭಾಯಿಸಲು 24 x 7 ವಿಧಾನದಲ್ಲಿ ಕಾರ್ಯನಿರ್ವಹಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

**ನಾವೇನು ಮಾಡಬಹುದು?**

ಜನಸಾಮಾನ್ಯರಾದ ನಾವು ನೀರಿನ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ವೈಯಕ್ತಿಕ ಮಟ್ಟದಲ್ಲಿ ನೀರಿನ ಮಿತವ್ಯಯ, ಮಳೆನೀರಿನ ಸಂಗ್ರಹ ಮತ್ತು ಮರುಬಳಕೆಯ ಕೆಲಸಗಳನ್ನು ಆಂದೋಲನದ ರೂಪದಲ್ಲಿ ಕೈಗೆತ್ತಿಕೊಳ್ಳಬೇಕಿದೆ. ಬರಲಿರುವ ಬರದ ದಿನಗಳಿಗಾಗಿ ನಾವು ಸಮುದಾಯವನ್ನು, ಶಿಕ್ಷಕರನ್ನು, ಮಕ್ಕಳನ್ನು, ಮನೆಯವರನ್ನು, ನೆರೆಹೊರೆಯವರನ್ನು ಎಲ್ಲ ಸಮನಸ್ಕ ಸಂಘ ಸಂಸ್ಥೆಗಳನ್ನು ಈಗಲೇ ಸಜ್ಜುಗೊಳಿಸಬೇಕಾಗಿದೆ.

- ಸ್ಥಳೀಯ ಸರಕಾರಗಳಾದ ಗ್ರಾಮ ಪಂಚಾಯಿತಿಗಳು ನೇತೃತ್ವ ವಹಿಸಿ ಶಾಲೆ-ಕಾಲೇಜುಗಳಲ್ಲಿ, ಮನೆಗಳಲ್ಲಿ ಮತ್ತು ಸಮುದಾಯದ ಎಲ್ಲಡೆ ನೀರಿನ ಮರುಬಳಕೆಯ ಉಪಾಯಗಳನ್ನು/ತಂತ್ರಗಳನ್ನು ತಿಳಿಸಿ ಜಾರಿಗೆ ತರಬೇಕು.
- ನೀರಿನ ಮಲಿನೀಕರಣವನ್ನು ತಡೆಯಬೇಕು. ನೀರಿನ ಮಲಿನೀಕರಣದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಮಾಲಿನ್ಯ ಸುರಿಯುವವರನ್ನು ಕಂಡರೆ ಸಂಬಂಧಪಟ್ಟವರಿಗೆ, ಮಾಲಿನ್ಯ ನಿಯಂತ್ರಣ ಮಂಡಳಿಗೆ, ನಗರ ಪಾಲಿಕೆಗೆ, ಪಂಚಾಯತಿಗೆ ದೂರು ಕೊಡಬೇಕು.
- ಶಾಲೆಗಳಲ್ಲಿ, ಮನೆಗಳಲ್ಲಿ, ಕಛೇರಿಗಳಲ್ಲಿ, ಕಲ್ಯಾಣ ಮಂಟಪಗಳಲ್ಲಿ ಮತ್ತು ಬಸ್ ನಿಲ್ದಾಣಗಳಲ್ಲಿ ಮಳೆನೀರಿನ ಸಂಗ್ರಹದ ಸಾಧನಗಳನ್ನು ಅಳವಡಿಸಿಕೊಳ್ಳಬೇಕು. ಮಳೆನೀರನ್ನು ಸೋಸಿ ಕುಡಿಯುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಈ ಬಗ್ಗೆ ಸಮುದಾಯವನ್ನು ಜಾಗೃತಿಗೊಳಿಸಬೇಕು.
- ನೀರಿನ ಖಾಸಗೀಕರಣದ ಯತ್ನಗಳು ನಡೆಯುತ್ತಿದ್ದರೆ ಈ ಬಗ್ಗೆ ಜನರಿಗೆ ಅರಿವಿನ ಅಭಿಯಾನ ಹಮ್ಮಿಕೊಂಡು ಅದನ್ನು ತಡೆಯುವ ಪ್ರಯತ್ನ ನಡೆಸಬೇಕು.

ನಾವು ಕಾಣುತ್ತಿರುವ ಆಶಾಕಿರಣ ಏನೆಂದರೆ, ಈ ಎಲ್ಲಾ ಆತಂಕಗಳ ನಡುವೆಯೂ ಮಳೆನೀರಿನ ಸಂಗ್ರಹ, ಇಂಗು ಗುಂಡಿಗಳ ಮಹತ್ವ ಮತ್ತು ಕೊಳವೆಬಾವಿ ಮರುಪೂರಣಗಳ ಬಗ್ಗೆ ಜನರಿಗೆ ಮನದಟ್ಟಾಗುತ್ತಿದೆ. ಮಳೆನೀರನ್ನು ಬಾವಿಯತ್ತ ತಿರುಗಿಸುವ ಕೆಲಸಗಳು ಮಳೆ ಚೆನ್ನಾಗಿ ಬಿದ್ದಾಗಲೇ ಚುರುಕಾಗಿ ಅಲ್ಲಲ್ಲಿ ನಡೆಯುತ್ತಿವೆ. ಇಂಥಹ ಮಾದರಿ ಕೆಲಸಗಳನ್ನು ಸಮುದಾಯ, ಮಾಧ್ಯಮಗಳು ಗುರುತಿಸಿ ಪ್ರೋತ್ಸಾಹಿಸಬೇಕಿದೆ. ಮನುಕುಲ ಆದಷ್ಟು ಬೇಗನೆ ಎಚ್ಚೆತ್ತು ವಸುದೈವ ಕುಟುಂಬದೊಳಗೆ ತನ್ನ ಬಾಧ್ಯತೆಗಳೇನು ಎಂಬುದನರಿತು ಅವುಗಳನ್ನು ಪಾಲಿಸುವುದಕ್ಕೆ ಆದ್ಯತೆ ನೀಡಬೇಕಾಗಿದೆ.

**ಗಾಂಧೀಜಿಯವರು ಹೇಳಿದಂತೆ ಈ ಧರಿತ್ರಿ ನಮ್ಮೆಲ್ಲರ ಅವಶ್ಯಕತೆಗಳನ್ನು ಪೂರೈಸಲು ಸಶಕ್ತಳು; ಆದರೆ ನಮ್ಮ ಅತಿ ಆಸೆಗಳನ್ನಲ್ಲ, ಎಂಬುದು ಇಂದಿಗಾದರೂ ನಮಗೆ ಮನವರಿಕೆಯಾಗಬೇಕು.**

ಸಂಯುಕ್ತ ರಾಷ್ಟ್ರಗಳ ಮಹಾ ಕಾರ್ಯದರ್ಶಿ ಬಾನ್ ಕಿ- ಮೂನ್, ಹವಾಮಾನ ಬದಲಾವಣೆಯಿಂದ ಬರ, ಈ ಸವಾಲನ್ನು ಎದುರಿಸುವ ಅನಿವಾರ್ಯತೆಯ ಕುರಿತು ಹೀಗೆ ಹೇಳುತ್ತಾರೆ, "ಹವಾಮಾನ ಬದಲಾವಣೆಯ ಕುರಿತು ನಾವೇನು ಮಾಡುತ್ತೇವೆ ಎಂಬುದು ನಮ್ಮನ್ನು, ನಮ್ಮ ಕಾಲಮಾನವನ್ನು ಹಾಗೂ ನಾವು ನಮ್ಮ ಮುಂದಿನ ಪೀಳಿಗೆಗಳಿಗೆ ಬಿಟ್ಟು ಹೋಗುವ ಜಾಗತಿಕ ಪರಂಪರೆಯನ್ನು ನಿರ್ಧರಿಸಲಿದೆ ಎಂದು ನಮಗೆ ಖಚಿತವಾಗಿದೆ. ನಮ್ಮ ಭವಿಷ್ಯ ನಮ್ಮ ಕೈಯಲ್ಲೇ ಇದೆ. ನಮ್ಮ ಮೊಮ್ಮಕ್ಕಳು ನಾವೇಕೆ ಸರಿಯಾದದ್ದನ್ನು ಮಾಡಲಿಲ್ಲವೆಂದು ಪ್ರಶ್ನಿಸುವುದರೊಂದಿಗೆ ನಮ್ಮ ತಪ್ಪಿನ ಫಲವನ್ನು ಅವರು ಅನುಭವಿಸುವಂತಾಗದಿರಲು ನಾವೆಲ್ಲರೂ ಒಂದಾಗಿ ಪ್ರಯತ್ನಿಸಬೇಕಿದೆ". ಈ ಪ್ರಜ್ಞೆಯ ಸುಸ್ಥಿರ ಅಭಿವೃದ್ಧಿ ನಮ್ಮೆಲ್ಲರ ಆದ್ಯ ಕರ್ತವ್ಯವೆಂಬುದನ್ನು ಮನಗಂಡು ಎಲ್ಲರೂ ಒಂದಾಗಿ ಶ್ರಮಿಸಿದರೆ ಹವಾಮಾನ ಬದಲಾವಣೆ ಮತ್ತು ಅದರಿಂದ ಉಂಟಾಗುವ ದುಷ್ಪರಿಣಾಮಗಳು ಅದರಲ್ಲೂ 'ಬರ' ಎಂಬ ಮಹಾಸವಾಲನ್ನು ಮೆಟ್ಟಿ ನಿಲ್ಲಬಹುದು.

# ಬಯೋಡೈಜೆಸ್ಟರ್–ದ್ರವರೂಪ ಗೊಬ್ಬರ ತಯಾರಿಕಾ ಘಟಕ

ಹಿಂದಿನ ಸಂಚಿಕೆಯಿಂದ ಮುಂದುವರಿದುದು...........................................

ಡಾ. ರಾಜಶೇಖರ್ – ನಿವೃತ್ತ ಉಪನ್ಯಾಸಕರು

## 1. ಬಯೋಡೈಜೆಸ್ಟರ್‌ನಿಂದ ದ್ರವಗೊಬ್ಬರವನ್ನು ಉತ್ಪಾದಿಸಲು ಬಳಸಬಹುದಾದ ತ್ಯಾಜ್ಯಗಳು:

**ಬೆಳೆಯ ತ್ಯಾಜ್ಯಗಳು**
ಧಾನ್ಯ ಬೆಳೆಗಳ ತ್ಯಾಜ್ಯಗಳು
ದ್ವಿದಳ ಧಾನ್ಯ ಬೆಳೆಗಳ ತ್ಯಾಜ್ಯಗಳು
ಪ್ಲಾಂಟೇಶನ್ ಬೆಳೆಗಳ (ಅಡಿಕೆ, ತೆಂಗು, ತಂಬಾಕು, ಕಬ್ಬು ಹಾಗೂ ಇತರೆ) ತ್ಯಾಜ್ಯಗಳು
ರೇಷ್ಮೆ ಕೃಷಿ ತ್ಯಾಜ್ಯಗಳು

**ಇತರೇ ಸಾವಯವ ತ್ಯಾಜ್ಯಗಳು**
ಅಡುಗೆ ಮನೆಯ ತ್ಯಾಜ್ಯಗಳು
ಮಾರುಕಟ್ಟೆಯ ತ್ಯಾಜ್ಯಗಳು
ಮುನ್ಸಿಪಲ್ ವೇಸ್ಟ್ (ಗಾಜು ಪ್ಲಾಸ್ಟ್ಕ ಮತ್ತು ಲೋಹ ಹೊರತು ಪಡಿಸಿ)
ಕೃಷಿ ಆಧಾರಿತ ಸಾವಯವ ಕಾರ್ಖಾನೆಗಳತ್ಯಾಜ್ಯಗಳು (ಹತ್ತಿಗಿರಣಿ,

**ಸೊಪ್ಪುಗಳು** – ಬೇವು, ಹೊಂಗೆ, ಗ್ಲಿರಿಸಿಡಿಯ, ತಂಗಡಿ ಮುಂತಾದ ಕಾಡು ಸೊಪ್ಪುಗಳು

**1. ಪ್ರಾಣಿ ಮೂಲದ ತ್ಯಾಜ್ಯಗಳು –**
ಸಗಣಿ, ಗಂಜಲ, ಹಿಕ್ಕೆ, ಕೋಳಿಫಾರಂ, ಸಕ್ಕರೆ ಕಾರ್ಖಾನೆ, ಡೈರಿ ಫಾರಂ, ಕಸಾಯಿಖಾನೆ ಮತ್ತು ಇತರೆ, ಮೂಲದ ತ್ಯಾಜ್ಯಗಳು

**2. ಬಯೋಡೈಜೆಸ್ಟರನ್ನು ಬಳಸುವ ಕ್ರಮ:** ಕೃಷಿ ಅಧಾರಿತ ತ್ಯಾಜ್ಯಗಳನ್ನು ಉತ್ಪಾದನಾ ತೊಟ್ಟಿಯೊಳಗೆ ಕಂಟಮಟ್ಟ ತುಂಬಿ ನೀರು ಕೊಡಬೇಕು (ತೊಟ್ಟಿಯ ಅರ್ಧಭಾಗದಷ್ಟು). 15–ರಿಂದ 20 ದಿನಗಳಲ್ಲಿ ಹಾಕಿದ ಘನ ತ್ಯಾಜ್ಯಗಳು ಚೆನ್ನಾಗಿ ಕಳಿತು ಅದರ ಪ್ರಮಾಣವು ತೊಟ್ಟಿಯೊಳಗಿನ ನೀರಿನ ಮಟ್ಟಕ್ಕೆ ಕುಸಿಯುತ್ತದೆ. ಈ ಹಂತದಲ್ಲಿ ಉತ್ಪಾದನಾ ತೊಟ್ಟಿಯ ಗೇಟ್‌ವಾಲ್ವ್‌ನ ಮೂಲಕ ಶೇಖರಣಾ ತೊಟ್ಟಿಗೆ ಹರಿಸಿಕೊಳ್ಳಬೇಕು. ನಂತರ ಬೆಳೆಗಳ ಅವಶ್ಯಕತೆಗೆ ತಕ್ಕಂತೆ ಬಳಸಿಕೊಳ್ಳಬಹುದು.

**3. ದ್ರವಗೊಬ್ಬರದಲ್ಲಿನ ಪೋಷಕಾಂಶಗಳು:** ದ್ರವಗೊಬ್ಬರದಲ್ಲಿನ ವಿವಿಧ ಪೋಷಕಾಂಶಗಳ ಪ್ರಮಾಣವು ವಿಭಿನ್ನವಾಗಿ ಇರುತ್ತದೆ. (ಬಳಸಿರುವ ತ್ಯಾಜ್ಯಗಳನ್ನು ಅವಲಂಬಿಸಿ) ಸಾಮಾನ್ಯವಾಗಿ ಈ ಕೆಳಗಿನಂತಿರುತ್ತದೆ – 1000 ಕಿಲೋ ಗ್ರಾಂ ದ್ರವಗೊಬ್ಬರದಲ್ಲಿರುವ ಅಂಶಗಳನ್ನು ಅಷ್ಟೇ ತೂಕದ ಇತರೇ ಸಾವಯವ ಗೊಬ್ಬರಗಳಿಗೆ ಹೋಲಿಸಿದಾಗ;

| ಕ್ರ. ಸಂಖ್ಯೆ | ಪೋಷಕಾಂಶಗಳು | ದೇಶೀ ಹಸುಗಳ ಸೆಗಣಿ | ಎಮ್ಮೆ ಸೆಗಣಿ | ಸಂಕರಣ ಹಸುವಿನ ಸೆಗಣಿ | ಪಂಚಗವ್ಯ (ಸಿಂಪರಣೆ 1: 25) | ಜೀವಾಮೃತ | ಬಯೋಡೈಜಸ್ಟರನ ದ್ರವ ಗೊಬ್ಬರ |
|---|---|---|---|---|---|---|---|
| 1. | ಸಾರಜನಕ (ಕಿ.ಗ್ರಾಂ.) | 6.1 | 6.8 | 8.1 | 2.4 | 1.8 –3.0 | 2.02–10.5 |
| 2. | ರಂಜಕ(ಕಿ.ಗ್ರಾಂ.) 0.1 | 0.1 | 0.1 | 0.32 | 0.26 | 0.6 – 8.1 | |
| 3. | ಪೊಟಾಷ್(ಕಿ.ಗ್ರಾಂ.) | 9.8 | 11.5 | 14.9 | 0.56 | 0.6 | 0.54 – 6.5 |
| 4. | ಕ್ಯಾಲ್ಸಿಯಂ(ಗ್ರಾಂ.) | 56.2 | 32 | 28 | 0.36 | 0.34 | 0.28 –0.54 |
| 5. | ಮಗ್ನೀಷಿಯಂ(ಗ್ರಾಂ.) | 115.2 | 104.4 | 88.8 | 1.00 | 0.86 | 0.72 |
| 6. | ಸೋಡಿಯಂ(ಮಿ.ಗ್ರಾಂ) | 0.14 | 0.16 | 0.17 | – | – | – |
| 7. | ಕಬ್ಬಿಣ(ಗ್ರಾಂ) | 3.06 | 6.81 | 3.70 | 150 | 136.3 | 131.4 |
| 8. | ಮ್ಯಾಂಗನೀಸ್(ಮೈ.ಗಾಂ) | 0.46 | 1.14 | 0.56 | 3.18 | 1.15 | 2.0 |
| 9. | ಸತು(ಗ್ರಾಂ) | 3.85 | 8.28 | 3.76 | 5.72 | 4.18 | 0.70 |
| 10. | ತಾಮ್ರ(ಮೈ.ಗ್ರಾಂ) 0.99 | 1.18 | 1.01 | 3.42 | 1.12 | 0.93 | |

**ದ್ರವಗೊಬ್ಬರದ ಅಭಿವರ್ಧನೆ:** ಬಯೋಡೈಜೆಸ್ಟರನ ದ್ರವಗೊಬ್ಬರದಲ್ಲಿನ ಪೋಷಕಾಂಶಗಳನ್ನು ಮತ್ತಷ್ಟು ವೃದ್ಧಿಸಲು ಕೃಷಿ ತ್ಯಾಜ್ಯಗಳ ಜೊತೆಗೆ ಈ ಕೆಳಗಿನ ಸಾವಯವ ಪದಾರ್ಥಗಳನ್ನು ಬಳಸಬಹುದು.

- ಹಿಂಡಿಗಳು: ಬೇವಿನ ,ಹೊಂಗೆಯ,ಶೇಂಗದ,ಹರಳಿನ ಮತ್ತು ಇತರೇ.,
- ಪ್ರಾಣಿ ಸಂಬಂಧಿ ತ್ಯಾಜ್ಯಗಳು – ಗೋಮೂತ್ರ, ಸೆಗಣಿ, ಮೀನುಗೊಬ್ಬರ, ಕುರಿಗೊಬ್ಬರ, ಕೋಳಿಗೊಬ್ಬರ,ಕಸಾಯಿಖಾನೆ ತ್ಯಾಜ್ಯ ಮತ್ತು ಇತರೇ.,
- ಪ್ರೆಸ್‌ಮಡ್,ಸುಣ್ಣ , ರಾಕ್ ಫಾಸ್ಫರೇಟ್, ಜಿಪ್ಸಂ ಮತ್ತು ಇತರೇ.,

ಇದರಿಂದ ಮುಖ್ಯ ಪೋಷಕಾಂಶಗಳ ಜೊತೆಗೆ ಲಘು ಪೋಷಕಾಂಶಗಳೂ ಸಹ ವೃದ್ಧಿ ಆಗುತ್ತವೆ

ಮುಂದುವರಿಯುವುದು . . . .

# ನರ್ಸಿಂಗ್ (ಡಿ.ಜಿ.ಎನ್.ಎಂ ಮತ್ತು ಬಿ.ಎಸ್.ಸಿ) ಕೋರ್ಸ್‌ಗಳಿಗೆ ಉಚಿತ ವಿದ್ಯಾಭ್ಯಾಸ

ನರ್ಸಿಂಗ್ (ಡಿ.ಜಿ.ಎನ್.ಎಂ ಮತ್ತು ಬಿ.ಎಸ್.ಸಿ) ಕೋರ್ಸ್‌ಗಳಿಗೆ ಆಯ್ಕೆ ಮಾಡಿ ಕರ್ನಾಟಕ ಶುಶ್ರೂಷ ಪರಿಷತ್, ಭಾರತೀಯ ಶುಶ್ರೂಷ ಪರಿಷತ್ ಮತ್ತು ರಾಜೀವ್‌ಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್ (RGUHS) ನಿಂದ ಮಾನ್ಯತೆ ಪಡೆದಿರುವ ಸರ್ಕಾರಿ/ಖಾಸಗಿ ನರ್ಸಿಂಗ್ ಶಾಲಾ/ಕಾಲೇಜುಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಉಚಿತವಾಗಿ ವಿದ್ಯಾಭ್ಯಾಸವನ್ನು ನೀಡಲಾಗುವುದು. ಸದರಿ ಅಭ್ಯರ್ಥಿಗಳಿಗೆ ತಗಲುವ ತರಬೇತಿ ಶುಲ್ಕಗಳನ್ನು ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿರುವಂತೆ ಸಂಬಂಧಪಟ್ಟಶಾಲಾ/ಕಾಲೇಜುಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಮಂಜೂರು ಮಾಡಲಾಗುವುದು.

❖ **ಡಿ.ಜಿ.ಎನ್.ಎಂ ನರ್ಸಿಂಗ್ ಕೋರ್ಸ್‌ನ ಅವಧಿ:** ಡಿ.ಜಿ.ಎನ್.ಎಂ ನರ್ಸಿಂಗ್‌ಗೆ: 3 ವರ್ಷ 6 ತಿಂಗಳು
**ವಿದ್ಯಾರ್ಹತೆ:**

- ದ್ವಿತೀಯ ಪಿ.ಯು.ಸಿ. ಯಲ್ಲಿ ವಿಜ್ಞಾನ ವಿಭಾಗದ ಐಚ್ಛಿಕ ವಿಷಯಗಳಲ್ಲಿ (ಭೌತಶಾಸ್ತ್ರ –Physics, ರಸಾಯನ ಷಾಸ್ತ್ರ–Chemistry & ಜೀವಶಾಸ್ತ್ರ – Biology) ಮತ್ತು ಇಂಗ್ಲೀಷ್ –English ವಿಷಯದಲ್ಲಿ ಶೇ.35 ರಷ್ಟು ಅಂಕ ಪಡೆದಿರಬೇಕು
- ದ್ವಿತೀಯ ಪಿ.ಯು.ಸಿ. ಕಲೆ ಮತ್ತು ವಾಣಿಜ್ಯ ವಿಭಾಗದಲ್ಲಿ ಹೆಚ್ಚು ಅಂಕಗಳನ್ನು ಪಡೆದ ಐಚ್ಛಿಕ ಮೂರು ವಿಷಯಗಳು + ಇಂಗ್ಲೀಷ್ ನಲ್ಲಿ ಶೇ.35 ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು.
(ಯಾವುದೇ ಜೆ.ಒ.ಸಿ.ಕೋರ್ಸ್‌ಗಳನ್ನು (Job oriented course) ಮಾಡಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ)
- ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.

❖ **ಬಿ.ಎಸ್ಸಿ ನರ್ಸಿಂಗ್ ಕೋರ್ಸ್‌ನ ಅವಧಿ:** 4 ವರ್ಷಗಳು
**ವಿದ್ಯಾರ್ಹತೆ:**

- ದ್ವಿತೀಯ ಪಿ.ಯು.ಸಿ. ಯಲ್ಲಿ ವಿಜ್ಞಾನ ವಿಭಾಗದ ಐಚ್ಛಿಕ ವಿಷಯಗಳಲ್ಲಿ (Physics, Chemistry & Biology) ಮತ್ತು English ವಿಷಯದಲ್ಲಿ ಶೇ.40 ರಷ್ಟು ಅಂಕ ಪಡೆದಿರಬೇಕು (ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ನಿಯಮದ ಪ್ರಕಾರ).

**ಅರ್ಹತೆಗಳು:**

1. ಅಭ್ಯರ್ಥಿಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ್ದು ಕರ್ನಾಟಕದ ನಾಗರೀಕರಾಗಿರಬೇಕು.
2. ಕನಿಷ್ಟ 17–35 ವರ್ಷದೊಳಗಿರಬೇಕು.
3. ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ ರೂ.2.50/–ಲಕ್ಷದೊಳಗಿರಬೇಕು.
4. ಭಾರತ ಸರ್ಕಾರದ ವಿದ್ಯಾರ್ಥಿವೇತನದ ನಿಯಮಾವಳಿಗೆ ಅರ್ಹರಿರಬೇಕು.
5. ತರಬೇತಿಗೆ ಗರ್ಭಿಣಿ ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ.
6. ಅಂಗವಿಕಲ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ವೈದ್ಯಕೀಯ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಪ್ರವೇಶ ಸಂದರ್ಭದಲ್ಲಿ ಹಾಜರುಪಡಿಸುವುದು. (ದೇಹದ ಕೆಳಭಾಗದಲ್ಲಿ (ಕಾಲು) ಶೇ. 40 ರಿಂದ 50 ರ ಒಳಗೆ ಅಂಗವಿಕಲತೆ ಹೊಂದಿರುವವರು ಮಾತ್ರ ಶುಶ್ರೂಷಾ ತರಬೇತಿ ಆಯ್ಕೆಗೆ ಅರ್ಹರಾಗಿರುತ್ತಾರೆ).

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ನರ್ಸಿಂಗ್ (ಜಿ.ಎನ್.ಎಂ ಮತ್ತು ಬಿ.ಎಸ್.ಸಿ) ಕೋರ್ಸ್‌ಗಳಿಗೆ ಹಾಗೂ ವಿವಿಧ ಅರೆವೈದ್ಯಕೀಯ ಕೋರ್ಸಗಳಿಗೆ ಆಯ್ಕೆ ಮಾಡಲಾಗುತ್ತದೆ. ಹೆಚ್ಚಿನ ವಿವರಗಳಿಗೆ ಇಲಾಖೆಯ ವೆಬ್‌ಸೈಟ್ http://sw.kar.nic.in ನ್ನು ನೋಡುವುದು.

# ವಾರ್ತಾ ವಿಶೇಷ

ಶ್ರೀ. ಕ್ಲೆಮೆಂಟ್ ಫೆರ್ನಾಂಡಿಸ್ ಮತ್ತು ಶ್ರೀ ರಿಚರ್ಡ್ ಮಾರ್ಟಿಸ್

## ಕೇಂದ್ರ ಹಾಗೂ ರಾಜ್ಯ ಲೋಕ ಸೇವಾ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 11 ನೇ ತಂಡದ ತರಬೇತಿ ಉದ್ಘಾಟನಾ ಕಾರ್ಯಕ್ರಮ

ರಾಜ್ಯದ ಯುವಜನತೆಯನ್ನು ಕೇಂದ್ರ ಹಾಗೂ ರಾಜ್ಯ ಲೋಕ ಸೇವಾ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡುವ ನಿಟ್ಟಿನಲ್ಲಿ ಜುಲೈ 6, 2015 ರಂದು ಕ್ರಾಸ್ ಸಂಸ್ಥೆಯಲ್ಲಿ 11 ನೇ ತಂಡದ ತರಬೇತಿ ಉದ್ಘಾಟನಾ ಕಾರ್ಯಕ್ರಮ ನೆರವೇರಿಸಲಾಯಿತು. ಸದರಿ ಕಾರ್ಯಕ್ರಮಕ್ಕೆ ಕರ್ನಾಟಕ ಕಥೋಲಿಕಾ ಧರ್ಮಾಧ್ಯಕ್ಷರ ಮಂಡಳಿಯ ಅಧ್ಯಕ್ಷರು ಮತ್ತು ಬೆಂಗಳೂರು ಮಹಾಧರ್ಮಕ್ಷೇತ್ರದ ಮಹಾಧರ್ಮಾಧ್ಯಕ್ಷರಾದ ಅತೀ ವಂದನೀಯ ಡಾ. ಬೆರ್ನಾರ್ಡ್ ಮೊರಾಸ್, ಅಧ್ಯಕ್ಷತೆ ವಹಿಸಿದರು. ಶ್ರೀ. ಸಿಬಿಚ್ಚೆನ್ ಮಾಥ್ಯು, ಐ. ಆರ್. ಎಸ್. ಸಲಹೆಗಾರರು–ಟ್ರಾಯಿ ಇಂಡಿಯ, ಇವರು ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀ ರಾಬಿನ್‌ಸನ್, ನಿವೃತ್ತ ಕಾನೂನು ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇವರು ವಿಶೇಷ ಆಹ್ವಾನಿತರಾಗಿದ್ದು 11 ನೇ ತರಬೇತಿ ತಂಡದ ಸದಸ್ಯರಿಗೆ ತಮ್ಮ ಮಾತುಗಳಿಂದ ಪ್ರೇರಣೆ ನೀಡಿ ಪ್ರೋತ್ಸಾಹಿಸಿದರು. ಕಾರ್ಯಕ್ರಮದಲ್ಲಿ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ಮತ್ತು ಅವರ ಪೋಷಕರು, ಅನೇಕ ಗುರುಗಳು ಮತ್ತು ಗಣ್ಯರು ಹಾಜರಿದ್ದರು.

**ಕ್ರಾಸ್ ಸಂಸ್ಥೆಯಲ್ಲಿ ನಡೆದ ಇತರ ತರಬೇತಿ ಮತ್ತು ಕಾರ್ಯಾಗಾರಗಳು:**

- ದಿನಾಂಕ 7 – 8 ಜುಲೈ 2015 ರಂದು ಭಾರತೀಯ ಸಮಾಜದ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಶ್ಲೇಷಣಾ ಕಾರ್ಯಾಗಾರವನ್ನು ಏರ್ಪಡಿಸಿದ್ದು, ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಅಭಿವೃದ್ಧಿ ಕಾರ್ಯಕರ್ತರು ಭಾಗವಹಿಸಿ ಈ ಕಾರ್ಯಾಗಾರದ ಪ್ರಯೋಜನ ಪಡೆದರು. ಈ ಕಾರ್ಯಕ್ರಮಕ್ಕೆ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಪ್ರೊ. ಇಂದಿರಾ ಕೃಷ್ಣಸ್ವಾಮಿ, ಚೆನ್ನೈ ಇವರು ಆಗಮಿಸಿ, ಎಲ್ಲ ಶಿಬಿರಾರ್ಥಿಗಳಿಗೆ ವಿಷಯ ಮಂಡಿಸಿ ಕಾರ್ಯಾಗಾರವನ್ನು ನಡೆಸಿಕೊಟ್ಟರು.
- ದಿನಾಂಕ 14, ಜುಲೈ 2015 ರಂದು ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ ಎಂಬ ವಿಷಯದ ಕುರಿತು ಒಂದು ದಿನದ ವಿಚಾರಸಂಕಿರಣವನ್ನು ಏರ್ಪಡಿಸಲಾಗಿತ್ತು. ಡಾ. ವಿ . ಆರ್. ಹರಿದಾಸ್, ಕಾರಿತಾಸ್ ಇಂಡಿಯ ಇದರ ವಲಯ ವ್ಯವಸ್ಥಾಪಕರು ಈ ವಿಚಾರ ಸಂಕಿರಣದ ಮುಖ್ಯ ಭಾಷಣಕಾರಾಗಿ ಆಗಮಿಸಿ ಅಭಿವೃದ್ಧಿ ಕಾರ್ಯಕರ್ತರು, ಸ್ವಯಂ ಸೇವಕರು ಮತ್ತು ಇತರ ಪ್ರತಿನಿಧಿಗಳಿಗೆ ಮಾಹಿತಿ ನೀಡಿದರು.
- ಅಭಿವೃದ್ಧಿ ಯೋಜನೆಗಳ ನಿರ್ವಹಣೆ (ಪ್ರೋಜೆಕ್ಟ್ ಸೈಕಲ್ ಮಾನೇಜ್ಮೆಂಟ್ – ಯೋಜನೆ ತಯಾರಿ, ಅನುಷ್ಠಾನ, ನಿಗಾವಹಿಸುವಿಕೆ ಮತ್ತು ಮೌಲ್ಯಮಾಪನ) ಕುರಿತು ದಿನಾಂಕ 21 – 24 ಜುಲೈ 2015 ರವರೆಗೆ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಕ್ರಾಸ್ ಸಂಸ್ಥೆಯ ಪಾಲುದಾರ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಇತರ ಸಮನಸ್ಕ ಸಂಸ್ಥೆಗಳ ಪ್ರತಿನಿಧಿಗಳು ಹಾಜರಿದ್ದು ಈ ತರಬೇತಿಯ ಪ್ರಯೋಜನ ಪಡೆದರು. ಶ್ರೀ. ಅಂಬ್ರೋಸ್ ಕ್ರಿಸ್ಪಿ, ಸಾಮಾಜಿಕ ಅಭಿವೃದ್ಧಿ ತಜ್ಞ , ಚೆನ್ನೈ, ಇವರು ಸುಗಮಕಾರರಾಗಿ ಆಗಮಿಸಿ ಕಾರ್ಯಾಗಾರವನ್ನು ವ್ಯವಸ್ಥಿತವಾಗಿ ನಡೆಸಿಕೊಟ್ಟರು
- ಪೌಷ್ಟಿಕ್ (ಉತ್ತರ ಕರ್ನಾಟಕದ 174 ಗ್ರಾಮಗಳಲ್ಲಿನ ಮಕ್ಕಳಲ್ಲಿ, ಹದಿಹರೆಯದ ಹೆಣ್ಣುಮಕ್ಕಳಲ್ಲಿ, ಗರ್ಭಿಣಿ ಹಾಗೂ ಎದೆಹಾಲುಣಿಸುವ ತಾಯಂದಿರಲ್ಲಿ ಅಪೌಷ್ಠಿಕತೆಯನ್ನು ನೀಗಿಸುವ ಯೋಜನೆ), ಈ ಯೋಜನೆಯ ಪುನರವಲೋಕನಾ ಕಾರ್ಯಕ್ರಮ ಹಾಗೂ ತರಬೇತಿಯನ್ನು ಜುಲೈ 27–28, 2015 ರಂದು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಎಲ್ಲಾ ಪಾಲುದಾರ ಸಂಸ್ಥೆಗಳು ತಮ್ಮ 3 ತಿಂಗಳ ಪ್ರಗತಿ ವರದಿಯನ್ನು ಮಂಡಿಸಿದರು. ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ತರಬೇತಿ ತಜ್ಞ, (ಐ.ಇ.ಸಿ. ವಿಭಾಗ) ಶ್ರೀಯುತ ಕೃಷ್ಣಮೂರ್ತಿಯವರು ತರಬೇತಿಯನ್ನು ನಿರ್ವಹಿಸಿಕೊಟ್ಟರು. ಉತ್ತರ ಕರ್ನಾಟಕದ ಕ್ರಾಸ್ ಸಹಭಾಗಿ ಸಂಸ್ಥೆಗಳ ಸಿಬ್ಬಂಧಿಯವರು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರಾರ್ಥಿಗಳು ಮುಂದಿನ 3 ತಿಂಗಳಿಗೆ ಕ್ರಿಯಾ ಯೋಜನೆ ತಯಾರಿಸಿ 2 ದಿನಗಳ ಶಿಬಿರವನ್ನು ಮುಕ್ತಾಯ ಗೊಳಿಸಲಾಯಿತು.
- ಶಾಂತಿ ಮತ್ತು ನ್ಯಾಯ ಆಯೋಗ, ಕರ್ನಾಟಕ ರಾಜ್ಯ ಮಟ್ಟದಲ್ಲಿ ದಿನಾಂಕ 12 – 08 –2015 ರಂದು ಒಂದು ದಿನದ ಕಾರ್ಯಗಾರ ಕ್ರಾಸ್ ಸಂಸ್ಥೆಯ ಸಹಯೋಗದಲ್ಲಿ ನಡೆಯಿತು. ವಂದನೀಯ ಸ್ವಾಮಿ. ಚಾರ್ಲ್ಸ್ ಹೃದಯಂ, ರಾಷ್ಟ್ರೀಯ ಕಾರ್ಯದರ್ಶಿ, ಶಾಂತಿ, ನ್ಯಾಯ ಮತ್ತು ಅಭಿವೃದ್ಧಿ ಆಯೋಗ ದೆಹಲಿ, ಇವರು ಸಂಪನ್ಮೂಲ ವ್ಯಕ್ತಿಯಾಗಿ ಈ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಕರ್ನಾಟಕ ರಾಜ್ಯ ಮಟ್ಟದಿಂದ ಪ್ರತಿನಿಧಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.
- **ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆ**
  ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆಯು ಆಗಸ್ಟ್ ತಿಂಗಳ 13, 2015 ರಂದು ಕ್ರಾಸ್ ನಲ್ಲಿ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ಅತೀ ವಂದನೀಯ ಡಾ.ಜೆರಾಲ್ಡ್ ಐಸಾಕ್ ಲೋಬೋ, ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಮತ್ತು ಉಡುಪಿ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರು ವಹಿಸಿದರು. ಅತೀ ವಂದನೀಯ ಡಾ.ಜೆರಾಲ್ಡ್ ಐಸಾಕ್ ಲೋಬೋರವರು ಸಭೆಗೆ ಆಗಮಿಸಿದ ಎಲ್ಲಾ ಆಹ್ವಾನಿತರನ್ನು ಆತ್ಮೀಯವಾಗಿ ಸ್ವಾಗತಿಸಿ ಸಭೆಯನ್ನು ಕ್ರಮ ಬದ್ಧವಾಗಿ ನಿರ್ವಹಿಸಿದರು. ಫಾ.ಸೆಬಾಸ್ಟಿಯನ್ ಫೆರ್ನಾಂಡಿಸ್‌ರವರು ಕ್ರಾಸ್ ಸಂಸ್ಥೆಯ ಕಾರ್ಯದರ್ಶಿಯವರು ನಿರ್ದೇಶಕ ಮಂಡಳಿಯ ಸಭೆಗೆ ಮಾಹಿತಿಯನ್ನು ನೀಡಿದರು.

ಪ್ರತಿಗಳಿಗಾಗಿ ಸಂಪರ್ಕಿಸಿ :

**ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)**

ಅಂಚೆ ಪೆಟ್ಟಿಗೆ – 8427 ನಂ. 58/6 , 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್, ವೀಲರ್ ರೋಡ್ ಬಡಾವಣೆ,
ಬೆಂಗಳೂರು 560084. ದೂರವಾಣಿ ಸಂಖ್ಯೆ : 080– 25496812/13, ಇ–ಮೇಲ್ : krossdir@gmail.com
ವೆಬ್‌ಸೈಟ್ : www.krossbangalore.com